# ಹರಿ ನೀನೇ ಗತಿಯೆಂದು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 123.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 590.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 248.
4. **Note:** Lyrics given here are as per Ref. 1. The wordings in other two reference books fully match with Ref. 1 and the singer has followed these wordings.

ರಾಗ: ಧನಶ್ರೀ ತಾಳ: ಅಟ

ಹರಿ ನೀನೆ ಗತಿಯೆಂದು ನೆರೆ ನಂಬಿದವರನು
ಮರೆತಿರುವುದು ನ್ಯಾಯವೆ || ಪ ||

ಗರುಡ ಗಮನ ನೀ ಸಿರಿಲೋಲನಾಗಿರೆ
ಅರಸಿ ಎನ್ನನು ಕಾಯ್ವ ದೊರೆಗಳಿನ್ಯಾರಯ್ಯ || ಅಪ ||

ಮುಟ್ಟಿ ಪೂಜಿಸಿ ನಿನ್ನ ಇಷ್ಟವ ಬೇಡುವ
ದೃಷ್ಟಿ ಎನ್ನೊಳಗಿದೆಯೆ
ಕಷ್ಟವ ಪಡಲಾರೆ ಸೃಷ್ಟಿಯೊಳಗೆ ಎನ್ನ
ದುಷ್ಟ ಕರ್ಮವ ಬಿಡಿಸಿ ದಿಟ್ಟನೆಂದನಿಸೊ || 1 ||

ಭುಜಗ ಶಯನ ನಿನ್ನ ಭಜಕರ ಹೃದಯದಿ
ನಿಜವಾಗಿ ನೀನಿಲ್ಲವೆ
ಅಜನ ಪಿತನೆ ಕೇಳು ತ್ರಿಜಗವೆಲ್ಲವು ನಿನ್ನ
ಸುಜನ ಪಾಲಕನೆಂದು ಭಜನೆ ಮಾಳ್ಪುದ ಕಂಡು || 2 ||

ಭಾಗವತರರಸನೆ ಯೋಗಿಗಳೊಡೆಯನೆ
ಬಾಗಿ ಬಿನ್ನಯಿಪೆ ನಿನ್ನ

ಸಾಗರ ಶಯನನೆ ನೀಗಿಸಿ ಶ್ರಮವನು
ಜಾಗು ಮಾಡದೆ ಎನ್ನ ಬೇಗದಿ ಕಾಯಯ್ಯ || 3 ||

ತುಂಟರೈವರ ತುಳಿದು ಕಂಟಕನೊಬ್ಬನ ಕಳೆದು
ಎಂಟು ಮಂದಿಯ ಗರ್ವವನಳಿದು
ನೆಂಟ ನೀ ಬಂದೆನ್ನ ಕಂಟಕವನೆ ಬಿಡಿಸಿ
ಉಂಟಾದ ವೈಕುಂಠ ಬಂಟನೆಂದೆನಿಸೊ || 4 ||

ಧರಣಿಯೊಳಗೆ ನೀ ಸುಜನರ ಸಲಹುವ
ಬಿರುದು ಪಡೆದವನಲ್ಲವೆ
ಸಿರಿ ರಮಣನೆ ಎನ್ನ ಕರುಣದಿಂದಲಿ ಕಾಯೋ
ಪರಮ ಪುರುಷ ಸಿರಿ ಪುರಂದರ ವಿಠಲ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಅನನ್ಯ ಗತಿಕನಾದ ಭಕ್ತನ ಮೊರೆ

**ನೆರೆ** = ಹೆಚ್ಚಾದ, ಕಠಿಣ, ಚೆನ್ನಾದ, ಸೇರು, ಒಂದಾಗು, ಕೂಡು

**ಅರಸಿ** = ಹುಡುಕಿಕೊಂಡು

**ಭುಜಗಶಯನ** – ಸರ್ಪಶಯನ ವಿಷ್ಣು.

**ಅಜನ ಪಿತನೆ** – ಬ್ರಹ್ಮನ ತಂದೆಯಾದ ವಿಷ್ಣುವೆ.

**ಸಾಗರಶಯನನೆ** – ಹಾಲಿನ ಸಮುದ್ರದಲ್ಲಿ ವಾಸ ಮಾಡುತ್ತಿರುವವನೆ.

**ಜಾಗು ಮಾಡದೆ** – ತಡಮಾಡದೆ, ಉದಾಸೀನ ಮಾಡದೆ.

**ತುಂಟರೈವರು** – ಪಂಚೇಂದ್ರಿಯಗಳು.

**ಕಂಟಕನೊಬ್ಬ** – 'ಮನಸ್ಸು' ಎಂಬ ಕಂಟಕಿ.

**ಎಂಟು ಮಂದಿಯ ಗರ್ವ** – ಅಷ್ಟಮದ, ಎಂಟು ಬಗೆಯಾದ ಮದಗಳು;

ಧನಮದ, ಕುಲಮದ, ವಿದ್ಯಾಮದ, ರೂಪಮದ, ಯೌವನಮದ, ಬಲಮದ, ಪರಿವಾರಮದ, ಅಧಿಕಾರಮದ.

**ಕಂಟಕವನೆ** – ಅಭ್ಯುದಯಕ್ಕೆ ಪ್ರತಿಪಕ್ಷಿಯಾದ ಪಾಪ.

**Classification:** Keerthane
**Ankita:** siri purandara vittala
**Location:** NA
**Category:** Jeevana Sambodhane, Artha Bhava
**Sub-Category:** Krishna, garuda, arasa, puje, karma, hrudaya, loka, bhagavata, garva, vaikunta, bhumi, jana, karuna, Vishnu, binnaha,
**Pravachana:** NA
**Explanation:** NA